ಪಂಚಾಯತ್'ನ ಕಾರ್ಯದರ್ಶಿ ರಮಾನಂದನ್ ಮಿಶ್ರಾ ಬೆಂಗಳೂರಿಗೆ ಬಂದರು; ಕಾಗೋಡು ವಿವಾದದ ಬಗ್ಗೆ ಮುಖ್ಯಮಂತ್ರಿ ಕೆ.ಸಿ. ರೆಡ್ಡಿಯವರ ಜೊತೆ ಮಾತುಕತೆ ನಡೆಸಿದರು.

24 ಜೂನ್ 1951. ಬೆಂಗಳೂರಿನ ಚಿಕ್ಕ ಲಾಲ್‌ಬಾಗ್‌ನಲ್ಲಿ ಲೋಹಿಯಾರ ಬಹಿರಂಗ ಭಾಷಣ: 'ಅಕ್ರಮವಾಗಿ ಹೊರದೂಡಲಾಗಿರುವ ರೈತರ ಸಮಸ್ಯೆಯನ್ನು ಸಿವಿಲ್ ದಾವೆ ಅಥವಾ ಕೃಷಿ ಪಂಚಾಯಿತಿ ತೀರ್ಮಾನ ಮಾಡಬೇಕಾಗಿತ್ತು' ಎಂದ ಲೋಹಿಯಾ, ರೈತರ ಹಕ್ಕೊತ್ತಾಯಗಳನ್ನು ಮಂಡಿಸಿದರು:

ರೈತರನ್ನು ಜಮೀನುಗಳಿಂದ ಹೊರದೂಡುವುದನ್ನು ನಿಷೇಧಿಸಿ ಸರ್ಕಾರ ಶಾಸನ ಜಾರಿ ಮಾಡಬೇಕು.

ಕೃಷಿ ವಿವಾದಗಳನ್ನು ಇತ್ಯರ್ಥ ಮಾಡಲು ಕೃಷಿ ಪಂಚಾಯತ್‌ಗಳನ್ನು ಏರ್ಪಡಿಸಬೇಕು.

ರೈತರು ಗುತ್ತಿಗೆ ಧಾನ್ಯವನ್ನು ಸರ್ಕಾರಿ ಡಿಪೋಗಳಲ್ಲಿ ಡಿಪಾಸಿಟ್ ಮಾಡಬೇಕು.

ಆಹಾರ ಉತ್ಪತ್ತಿ ಹೆಚ್ಚಿಸಲು ಆಹಾರ ಸೇನೆ ರಚಿಸಬೇಕು.

ಸಂಜೆ ರಾಂಚಿಗೆ ತೆರಳುವ ಮುನ್ನ ಲೋಹಿಯಾ ಹೇಳಿದರು:

'ಶತಮಾನಗಳಿಂದ ಜಡಾವಸ್ಥೆಗೆ ತಳ್ಳಲ್ಪಟ್ಟಿರುವ ಬಡವರ ಭೂಮಿಗೆ ಸಂಬಂಧಿಸಿದ ಚಳುವಳಿಯಲ್ಲಿ ಭಾಗವಹಿಸಲು ಅವಕಾಶ ಮಾಡಿಕೊಟ್ಟ ಈ ಸುಂದರ ಮೈಸೂರು ರಾಜ್ಯಕ್ಕೆ ನಾನು ಕೃತಜ್ಞ. ಕಾಗೋಡಿನ ಕೆಂಚಪ್ಪ ಮತ್ತು ಮಾಸ್ತಿಯಂಥವರು ಮಾತ್ರವಲ್ಲ, ಭಾರತದ ಎಲ್ಲರೂ ತಮ್ಮ ಹಕ್ಕು ತಮಗೆ ದೊರೆಯಬೇಕೆಂದು ಆಗ್ರಹಿಸುತ್ತಿದ್ದಾರೆ. ಇನ್ನೊಂದೆರಡು ದಿನದಲ್ಲಿ ಈ ಜಮೀನುಗಳನ್ನು ಸಾಗುವಳಿ ಮಾಡಲು ರೈತರಿಗೆ ಅವಕಾಶ ಕೊಡಬೇಕು. ರೈತರಿಗೆ ನೆರೆಯ ಗ್ರಾಮದವರು ಸಸಿಗಳನ್ನು ಉಚಿತವಾಗಿ ಕೊಡಬೇಕು. ನನ್ನ ಮೇಲಿನ ಮೊಕದ್ದಮೆಯನ್ನು ವಾಪಸ್ ಪಡೆದು, ನನ್ನಂಥದೇ ಆಪಾದನೆಗಳಿಗೆ ಗುರಿಯಾಗಿರುವ ಇತರರನ್ನು ಸೆರೆಮನೆಯಲ್ಲಿ ಉಳಿಸುವುದು ಪ್ರಜಾಪ್ರಭುತ್ವಕ್ಕೆ ಅಥವಾ ಕಾನೂನಿನ ಮುಂದೆ ಎಲ್ಲರೂ ಸಮಾನರೆಂಬ ತತ್ವಕ್ಕೆ ಸಲ್ಲದು.'

ಲೋಹಿಯಾ ಮತ್ತು ರಮಾನಂದನ್ ಮಿಶ್ರಾ ಬೆಂಗಳೂರಿನಿಂದ ರಾಂಚಿಯ ಸಮಾಜವಾದಿ ಪಕ್ಷದ ಅಧಿವೇಶನಕ್ಕೆ ಹೊರಟರು.

ಈ ನಡುವೆ ಜೆ.ಪಿ. ಸಾಗರಕ್ಕೆ ಬಂದು ಸತ್ಯಾಗ್ರಹಿಗಳಲ್ಲಿ ಧೈರ್ಯ ತುಂಬಿದರು. ಭೂಗತರಾಗಿದ್ದ ಗೋಪಾಲಗೌಡರು ಬಂಧಿಯಾದರು. ಕೊನೆಗೂ ಸರ್ಕಾರ ಕಾಗೋಡು ವಿವಾದದ ಬಗ್ಗೆ ವಿಚಾರಣೆ ಮಾಡಲು ಸಮಿತಿಯೊಂದನ್ನು ರಚಿಸಲು ಒಪ್ಪಿತು.

ಕಾಗೋಡು ಸತ್ಯಾಗ್ರಹದ ಮತ್ತೊಂದು ಫಲಶ್ರುತಿಯೂ ಕುತೂಹಲಕರವಾಗಿತ್ತು: ಕಾಗೋಡು ಹೋರಾಟದ ನೆಲೆಗಳನ್ನೇ ಪ್ರಶ್ನಿಸಿದ್ದ ಹಿಂದೂ ಮಹಾಸಭಾ, 1951ರ ಜೂನ್ 25ರಂದು ನಡೆದ ಚುನಾವಣಾ ಸಿದ್ಧತೆಯ ರಾಷ್ಟ್ರೀಯ ಅಧಿವೇಶನದಲ್ಲಿ 'ಜಮೀನ್ದಾರಿ ಪದ್ಧತಿಯ ರದ್ದು', 'ಭೂಮಿ ಹಂಚಿಕೆ' ಎರಡನ್ನೂ ತನ್ನ ಕಾರ್ಯಕ್ರಮಗಳ ಪಟ್ಟಿಯಲ್ಲಿ ಘೋಷಿಸಿತು. ಅದರ ಜೊತೆಗೇ, 'ಜಮೀನ್ದಾರಿ ರದ್ದತಿಗೆ ಮಹಾಸಭಾ ಬೆಂಬಲ ನೀಡುವುದಾದರೂ ಈ ಬಗ್ಗೆ ಅವಸರ ಪಡದೆ ಸೂಕ್ತ ಕಾಲಕ್ಕಾಗಿ ಕಾಯುವುದು' ಎಂಬ ಜಾಣ ಟಿಪ್ಪಣಿಯೂ ಇತ್ತು!

ಕಾಗೋಡು ಸತ್ಯಾಗ್ರಹ ಸಮಾಜವಾದಿ ಪಕ್ಷಕ್ಕೆ ಶಿವಮೊಗ್ಗ ಜಿಲ್ಲೆಯಲ್ಲಿ ಭದ್ರ ನೆಲೆಯನ್ನೊದಗಿಸಿತು. ಪ್ರಬಲ ಭೂಮಾಲೀಕರನ್ನು ಬಿಟ್ಟು, ಬ್ರಾಹ್ಮಣರಿಂದ ಹಿಡಿದು ಎಲ್ಲ ಜಾತಿಯ ಜನರ ಬೆಂಬಲವೂ ಸಮಾಜವಾದಿ ಪಕ್ಷಕ್ಕೆ ದೊರೆಯಿತು. ಭೂಮಾಲೀಕ ವರ್ಗಕ್ಕೆ ಸೇರಿದ್ದ ಕಡಿದಾಳು ಶಾಮಣ್ಣ ಥರದವರು ಸಮಾಜವಾದದತ್ತ ತಿರುಗಿದರು. ಸಮಾಜವಾದಿ ಎಂದರೆ ಜಾತಿಭೇದ ಮಾಡದವನು, ಸಮಾನತೆಯನ್ನು ಒಪ್ಪುವವನು ಎಂಬ ಅರ್ಥವೂ ನೆಲೆಯೂರತೊಡಗಿತು ಹಾಗೂ ಒಂದು ಮಟ್ಟದಲ್ಲಾದರೂ ವರ್ಗ ಸಂಘರ್ಷವೂ ಶುರುವಾಗಿತ್ತು ಎಂಬುದನ್ನು ಕಡಿದಾಳು ಶಾಮಣ್ಣ ಗುರುತಿಸುತ್ತಾರೆ. ಗೋಪಾಲಗೌಡರು ಮುಂದೆ ಲೋಹಿಯಾರ ನೆಚ್ಚಿನ ಸಂಗಾತಿಯಾದರು. ಸಮಾಜವಾದಿ ಪಕ್ಷ ಎತ್ತಿದ ಪ್ರಶ್ನೆಗಳು ಕಾಲಾನಂತರದಲ್ಲಿ ಕಾಯ್ದೆಗಳಾದವು.

ಲೋಹಿಯಾ ಕಾಗೋಡಿಗೆ ಬರುವ ಮೊದಲು ಜೂನ್ 3ನೇ ತಾರೀಕು ರಾಜ್‌ಘಾಟ್‌ನಲ್ಲಿ ಗಾಂಧಿ ಸಮಾಧಿಯೆದುರು 'ಸಣ್ಣದಾಗಲಿ, ದೊಡ್ಡದಾಗಲಿ ಎಲ್ಲ ರೀತಿಯ ಅನ್ಯಾಯದ ಕೃತ್ಯಗಳನ್ನು ವಿರೋಧಿಸಬೇಕು' ಎಂದು ಜನರಿಗೆ ಬೋಧಿಸಿದ್ದರು. ಈ ಪ್ರತಿಜ್ಞೆ ಬೋಧಿಸಿದ ಕೆಲವೇ ದಿನಗಳಲ್ಲಿ ತಾನೇ ಆ ಕೆಲಸದಲ್ಲಿ ತೊಡಗಬೇಕಾಯಿತಲ್ಲ ಎಂದು ಲೋಹಿಯಾಗೆ ವಿಸ್ಮಯವಾಯಿತು.

ಜುಲೈ ಕೊನೆಯ ವಾರದಲ್ಲಿ ಲೋಹಿಯಾ ಸಮಾಜವಾದಿಗಳ ವಿಶ್ವ ಸಮ್ಮೇಳನಕ್ಕೆ ಫ್ರಾಂಕ್‌ಫರ್ಟ್‌ಗೆ ಹೊರಟರು. ಜಗತ್ತು ಅಮೆರಿಕ ಹಾಗೂ ರಷ್ಯಾ ಎಂಬ ಎರಡು ಶಕ್ತಿಗಳ ನಡುವೆ ಸಿಕ್ಕಿಕೊಂಡಿರುವುದನ್ನು ತಪ್ಪಿಸಲು ಏಷ್ಯಾದ ಸಮಾಜವಾದವನ್ನು ರೂಪಿಸಬೇಕೆಂಬ ಬಗ್ಗೆ ವಿಸ್ತೃತ ಚರ್ಚೆಯನ್ನಾರಂಭಿಸಿದರು.

ಜರ್ಮನಿ ಬಿಟ್ಟು ಹದಿನೆಂಟು ವರ್ಷಗಳ ನಂತರ ಬರ್ಲಿನ್‌ಗೆ ಭೇಟಿ ಕೊಟ್ಟ ಲೋಹಿಯಾ ಅಲ್ಲಿನ ಗೆಳೆಯರನ್ನು ಹುಡುಕಿಕೊಂಡು ಹೋದರು; ಅವರ ಪೈಕಿ ಹಲವರು ತೀರಿಕೊಂಡಿದ್ದರು. ಫ್ರಾಂಕ್‌ಫರ್ಟ್‌ನಲ್ಲಿ ಸಿಕ್ಕ ಗೆಳೆಯ ವೆರ್ನರ್, 'ನನ್ನ ಹಳೆಯ ಗೆಳೆಯರಲ್ಲಿ ನೀನೊಬ್ಬನೇ ಉಳಿದಿರುವವನು' ಎಂದ! ಜರ್ಮನ್ನನೊಬ್ಬ ಇಂಡಿಯಾದ ಒಬ್ಬನಿಗೆ 'ನೀನೊಬ್ಬನೇ ಉಳಿದಿರುವ ಗೆಳೆಯ; ಉಳಿದವರೆಲ್ಲ ತೀರಿಕೊಂಡಿದ್ದಾರೆ' ಎನ್ನುವುದು ನಮ್ಮ ಪ್ರಪಂಚದ ಭೀಕರ ಏಕಾಂತ' ಎಂದು ಲೋಹಿಯಾಗೆ ಅನ್ನಿಸಿತು.

ಬರ್ಲಿನ್‌ನಿಂದ ಲೋಹಿಯಾ ಪ್ಯಾರಿಸ್‌ಗೆ ಹೊರಟರು; ವಿಚಾರ ಕ್ರಾಂತಿಯ ತಾಣವಾಗಿದ್ದ ಪ್ಯಾರಿಸ್ ವಿಚಾರದಿಂದ ಪ್ರಚಾರಕ್ಕೆ ಹೊರಳಿದ್ದನ್ನು ಕಂಡು ದುಗುಡಗೊಂಡರು. ಪ್ಯಾರಿಸ್ ರೇಡಿಯೋದ ಭಾಷಣದಲ್ಲಿ ಲೋಹಿಯಾ ಹೇಳಿದರು: 'ಐವತ್ತು ವರ್ಷಗಳ ಹಿಂದೆ ಜನ ಹೇಗೆ ಯೋಚಿಸುತ್ತಿದ್ದರೋ ಅದೇ ಥರದ ವಿಚಾರದಲ್ಲಿ ಹುದುಗಿಕೊಂಡಿದ್ದಾರೆ. ಹೀಗಾಗಿ, ಈಗ ವಿಚಾರವು ಅಧಿಕಾರಾರೂಢ ಪ್ರಭುತ್ವದ ಗುಲಾಮನಾಗಿಬಿಟ್ಟಿದೆ.'

ಈ ಮಾತನ್ನು ಲೋಹಿಯಾ ಮುಂದೆ ವಿವರಿಸಿದರು: 'ನಾಲ್ಕೂ ದಿಕ್ಕಿನಿಂದಲೂ ಸ್ಥಗಿತವಾದ ವಿಚಾರಗಳೇ ಮುತ್ತುತ್ತಿವೆ. ಒಂದು ಸಿದ್ಧಾಂತ ನಮ್ಮನ್ನು ಅನಿಶ್ಚಿತ ಭವಿಷ್ಯದಲ್ಲಿ ಪ್ರಗತಿ ಸಾಧಿಸುವ ಆಯುಧವನ್ನಾಗಿ ಮಾಡುತ್ತದೆ. ಮತ್ತೊಂದು ಸಿದ್ಧಾಂತ ನಮ್ಮನ್ನು ಯಥಾಸ್ಥಿತಿವಾದದ ಆಯುಧವನ್ನಾಗಿ ಮಾಡುತ್ತದೆ. ಈಗ ವಿಚಾರ ಕೇವಲ ಪ್ರಚಾರಾತ್ಮಕವಾಗಿಬಿಟ್ಟಿದೆ. ವಿಚಾರಗಳನ್ನು ಆಯುಧಗಳಂತೆ ನೋಡಬಾರದು; ವಿಚಾರಗಳನ್ನು ಅವುಗಳ ಮೂಲ ಸೃಜನಾತ್ಮಕ ರೂಪದಲ್ಲಿ ನೋಡಬೇಕು.'

ಗಾಂಧಿ ಟೋಪಿ, ಜುಬ್ಬಾ, ವೇಸ್ಟ್ ಕೋಟ್, ಧೋತಿಯಲ್ಲಿಲೋಹಿಯಾಅಮೆರಿಕಕ್ಕೆ ಬಂದಿಳಿದರು. ಪ್ರವಾಸದ ವೇಳಾಪಟ್ಟಿಯ ಪ್ರಕಾರ ಅವರು ಮೊದಲ ವಾರದಲ್ಲೇ ಅಮೆರಿಕದಲ್ಲಿರಬೇಕಾಗಿತ್ತು. ಕಾಗೋಡು ಬಂಧನದಿಂದಾಗಿ ಪ್ರವಾಸದ

## ಕಳೆದ ಸಂಚಿಕೆಯಲ್ಲಿ

ಸರ್ಕಾರದ ಮಂತ್ರಿಗಳನ್ನು ಮುಗಿಸುವ ತಮ್ಮ ಮೇಲಿನ ಆರೋಪದ ಹುಸಿತನವನ್ನು ಗಾಂಧೀಜಿಗೆ ಲೋಹಿಯಾ ಮನವರಿಕೆ ಮಾಡಿಕೊಟ್ಟರು. ತನ್ನ ಜನರ ಗೌರವಕ್ಕೆ ಪಾತ್ರನಾಗಿ, ಅವರ ಕೆಲಸಕಾರ್ಯಗಳಲ್ಲಿ ಅಂಕುಶವಾಗಿ ನಿಲ್ಲುತ್ತಿದ್ದ ರಕ್ಷಕನ ಪಾತ್ರ ನಿಭಾಯಿಸುತ್ತಿದ್ದ ಮಹಾತ್ಮ ವಿಸ್ಮಯದಂತೆ ಲೋಹಿಯಾಗೆ ಕಾಣಿಸಿದರು. ಲೋಹಿಯಾರ ಸಾರ್ವಜನಿಕ ಜೀವನದ ಜೊತೆಗೆ ವೈಯಕ್ತಿಕ ಜೀವನದ ಬಗ್ಗೆಯೂ ಗಾಂಧೀಜಿಗೆ ಕಾಳಜಿಯಿತ್ತು. ಗಾಂಧೀಜಿ ಹಾಗೂ ಲೋಹಿಯಾ ನಡುವೆ ಗುರು–ಶಿಷ್ಯರ ಸಂಬಂಧ ರೂಪುಗೊಂಡಿತ್ತು. ಧೂಮಪಾನದಿಂದ ದೂರವಾಗುವಂತೆ ಗಾಂಧೀಜಿ ಹೇಳಿದಾಗ ಇಲ್ಲವೆನ್ನಲು ಲೋಹಿಯಾರಿಗೆ ಸಾಧ್ಯವಾಗಲಿಲ್ಲ. ಕಾಂಗ್ರೆಸ್‌ನ ಕುರಿತ ಲೋಹಿಯಾ ಟೀಕೆಗಳನ್ನೂ ಗಾಂಧೀಜಿ ಸಕಾರಾತ್ಮಕವಾಗಿ ಸ್ವೀಕರಿಸುತ್ತಿದ್ದರು. ಇಂಥ ಮಹಾತ್ಮ ಕೊಲೆಯಾದುದು ಲೋಹಿಯಾರಿಗೆ ಸಹಿಸಿಕೊಳ್ಳಲಾಗದ ಆಘಾತವಾಗಿತ್ತು. ಗಾಂಧಿ ಗೈರುಹಾಜರಿಯಲ್ಲಿ 'ಸೋಷಲಿಸ್ಟ್ ಪಕ್ಷ'ದ ಚಟುವಟಿಕೆಗಳಲ್ಲಿ ತೀವ್ರವಾಗಿ ತೊಡಗಿಸಿಕೊಂಡರು. ಮೈಸೂರು ರಾಜ್ಯದ ಕಾಗೋಡಿನಲ್ಲಿ ನಡೆಯುತ್ತಿದ್ದ ಗೇಣಿದಾರರ ಹೋರಾಟ ಅವರ ಗಮನಸೆಳೆಯಿತು.